OS No. 229/2021 PW.1

ಅಸಲು ದಾವೆ ಸಂಖ್ಯೆ -229/2021
ಪಿ.ಡಬ್ಲ್ಯೂ - 01
ದಿನಾಂಕಃ 21-11-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 1 ರಿಂದ 5 ನೇ ಪ್ರತಿವಾದಿಯರ ಪರ ಶ್ರೀ. ಎಂ ಜಿ ಎನ್ ವಕೀಲರಿಂದ**

ನೀವು ವಿದ್ಯಾಭ್ಯಾಸ ಮಾಡಿದ್ದೀರಾ ಎಂದರೆ 2 ನೇ ತರಗತಿಯವರೆಗೆ ಮಾಡಿದ್ದೇನೆ. ನಿಮ್ಮ ಜನ್ನ ದಿನಾಂಕ ಹೇಳಲು ಆಗುತ್ತದೆಯಾ ಎಂದರೆ 1961 ಇರಬಹುದು. ನಿಖರಾವಾಗಿ ನನಗೆ ಗೊತ್ತಿಲ್ಲ. ದಾವೆಯನ್ನು ಮಾಡಲು ಯಾರು ಮಾಹಿತಿ ನೀಡಿದರು ಎಂದರೆ ನಾನೇ ನೀಡಿರುತ್ತೇನೆ. ಈ ಹಿಂದೆ ಇದೆ ನ್ಯಾಯಾಲಯದಲ್ಲಿ ಒಂದು ಪ್ರಕರಣವನ್ನು ದಾಖಲು ಮಾಡಿದ್ದೀರಿ ಎಂದರೆ ಸರಿ. ಅದು ಅಸಲು ದಾವಾ ಸಂಖ್ಯೆ 97/2012 ಇರುತ್ತದೆ ಎಂದರೆ ಸರಿ. ಸದರಿ ದಾವೆಯನ್ನು ಬರೆಯಲು ಮಾಹಿತಿ ನೀಡಿದ್ದರು ಎಂದರೆ ನಾನೇ ನೀಡಿದ್ದೇನು. ಸದರಿ ದಾವೆಯನ್ನು ಯಾರ ವಿರುದ್ಧ ಹೂಡಿದ್ದೀರಿ ಎಂದು ಹೇಳಲು ಆಗುತ್ತದೆಯಾ ಎಂದರೆ ಗೋಣಗಿ ಹನಮಂತಪ್ಪ, ನಕಲಪ್ಪ, ರಾಮವ್ವ ಎತ್ತಿನ, ರತ್ನವ್ವ ವಾಲಿಕಾರ, ರತ್ನವ್ವ ಸಂಶಿ. ಅಸಲು ದಾವಾ ಸಂಖ್ಯೆ 97/2012 ರಲ್ಲಿ ಸಲ್ಲಿಸಿದ ವಂಶಾವಳಿ ಮತ್ತು ಈ ದಾವೆಯಲ್ಲಿ ಸಲ್ಲಿಸಿದ ವಂಶಾವಳಿಯು ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲಿ ಒಂದೇ ಇರುತ್ತದೆ.

ಅಸಲು ದಾವಾ ಸಂಖ್ಯೆ 97/2012 ರಲ್ಲಿ ಮೂಲ ಪುರಷ ಯಲ್ಲಪ್ಪ, ಅವನಿಗೆ ಇಬ್ಬರು ಹೆಂಡತಿಯರು ಮತ್ತು ಬಸವರಾಜ ರತ್ನವ್ವ ನಕಲಪ್ಪ, ಹನಮಂತಪ್ಪ ಮಾತ್ರ ಮಕ್ಕಳು ಎಂದು ತೋರಿಸಿದ್ದೀರಿ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ಪ್ಯಾರಾ ನಂ. 3 ರಲ್ಲಿ ತೋರಿಸಿರುವ ವಂಶ ವೃಕ್ಷ ಒಪ್ಪಿಕೊಂಡಿರುತ್ತಾರೆ. ಅಸಲು ದಾವಾ ಸಂಖ್ಯೆ 97/2012 ರಲ್ಲಿ ಯಲ್ಲಪ್ಪನಿಗೆ ಕೇವಲ ಬಸವರಾಜ, ರತ್ನವ್ವ, ನಕಲಪ್ಪ ಮತ್ತು ಹನಮಂತಪ್ಪ ಎಂದು ಮಾತ್ರ ತೋರಿಸಿದ್ದೀರಿ ಎಂದರೆ ಸರಿ. ಮುಂದುವರೆದು ಉಳಿದವರು ಮದುವೆಯಾಗಿ ಹೋಗಿರುತ್ತಾರೆ. ಉಳಿದವರು ಮದುವೆಯಾಗಿ ಹೋಗಿದ್ದಾರೆ ಎಂದರು ಆ ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿ. ಆ ರೀತಿ ಬರೆಸಲು ನಿಮಗೆ ತೊಂದರೆ ಏನು ಇರಲಿಲ್ಲ ಎಂದರೆ ಇರಲಿಲ್ಲ.

ಮೂಲಪುರಷ ಯಲ್ಲಪ್ಪ ರವರಿಗೆ ಕರಿಯವ್ವ ಎಂಬ ಹೆಂಡತಿ ಇದ್ದಳು ಎಂದರೆ 2 ನೇ ಹೆಂಡತಿ ಇದ್ದರು. ಯಲ್ಲಪ್ಪ ಮತ್ತು ಕರಿಯವ್ವ ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು 3 ಜನ ಗಂಡು ಮಕ್ಕಳು ಇದ್ದರು ಎಂದರೆ ಸರಿ. ಅವರ ಹೆಸರು ರಾಮವ್ವ, ಸಹದೇವಪ್ಪ, ನಕಲಪ್ಪ, ಹನಮಂತಪ್ಪ, ರತ್ನವ್ವ ಎಂದರೆ ಸರಿ. ಸಹದೇವಪ್ಪನ್ನು ದ್ಯಾಮವ್ವ ತಳವಾರ ರವರಿಗೆ ದತ್ತಕವಾಗಿದ್ದಾನೆ ಎಂದರೆ ಸರಿ. ಪ್ರಸ್ತುತ ದಾವೆ ಮತ್ತು ಹಳೆ ದಾವೆಯಲ್ಲಿ ಸಹದೇವಪ್ಪನನ್ನು

ವಂಶಾವಳಿಯಲ್ಲಿ ತೋರಿಸಿಲ್ಲ ಎಂದರೆ ತೋರಿಸಿಲ್ಲ. ಅವನು ದತ್ತಕ ಆಗಿದ್ದ ಕಾರಣ ತೋರಿಸಿರುವುದಿಲ್ಲ. ಈ ವಿಷಯವನ್ನು ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿ. ಈ ವಿಷಯವನ್ನು ದಾವೆಯಲ್ಲಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಅವನು ದತ್ತಕವಾಗಿದ್ದರಿಂದ ಬರೆಸಿರುವುದಿಲ್ಲ.

ಮೂಲ ಪುರಷ ಯಲ್ಲಪ್ಪನಿಗೆ ಯಲ್ಲವ್ವ ಎಂಬ ಹೆಂಡತಿಯು ಇಲ್ಲ ಹಾಗೂ ಬಸವರಾಜ ಮತ್ತು ರತ್ನವ ಎಂಬ ಮಕ್ಕಳು ಇಲ್ಲ ಎಂದರೆ ಸರಿಯಲ್ಲ. ಯಲ್ಲಪ್ಪ ಯಾವಾಗ ತೀರಿಕೊಂಡರು ಎಂದು ಹೇಳಲು ಆಗುತ್ತದೆಯಾ ಎಂದರೆ ನೆನೆಪಿಲ್ಲ. ಮುಂದುವೆರದು ದಾಖಲಾತಿ ಹಾಜರುಪಡಿಸಿದ್ದೇನೆ. ಕರೆಯವ್ವ ಯಾವಾಗ ತೀರಿಕೊಂಡರು ಎಂದರೆ ಹೇಳಲು ಆಗುವುದಿಲ್ಲ. ಹುಲಗೂರಿನಲ್ಲಿ ತೀರಿಕೊಂಡಿರುತ್ತಾರೆ. ಅದೇ ರೀತಿ ನಕಲಪ್ಪ ಯಾವಾಗ ತೀರಿಕೊಂಡಲು ಎಂದರೆ 2020 ರಲ್ಲಿ ತೀರಿಕೊಂಡನು ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. ರಾಮವ್ವ ರತ್ನವ್ವ, ಮತ್ತು ಪುತ್ರಪ್ಪ ಯಾವಾಗ ತೀರಿಕೊಂಡಲು ಎಂದರೆ ನನಗೆ ಗೊತ್ತಿಲ್ಲ. ರಾಮವ್ವ ಕೋಂ ರಾಮಪ್ಪ ಯತ್ತಿನ ಯಾವಾಗ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಹೂಲಗೂರಿನಲ್ಲಿ ತೀರಿಕೊಂರುತ್ತಾರೆ. ರಾಮವ್ವಳಿಗೆ ಫಕ್ಕೀರಪ್ಪ, ದ್ರಾಕ್ಷಾಯಣಿ ಮತ್ತು ಶಾರವ್ವ ಎಂಬ ಮೂರು ಮಕ್ಕಳು ಎಂದರೆ ಸರಿ. ನೀವು ಸಲ್ಲಿಸಿದ ವಂಶಾವಳಿಯಲ್ಲಿಶಾರವ್ವ ರವರನ್ನು ತೋರಿಸಿರುವುದಿಲ್ಲ ಎಂದರೆ ಸರಿ. ಅವಳು ತೀರಿಕೊಂಡಿರುತ್ತಾರೆ. ರಾಮವ್ವಳ ಮಗ ಫಕ್ಕಿರಪ್ಪನು ತೀರಿಕೊಂಡಿರುತ್ತಾರೆ ಎಂದರೆ ಸರಿ. ಫಕ್ಕೀರಪ್ಪನಿಗೆ ಹೆಂಡತಿ ಮಕ್ಕಳು ಇದ್ದಾರಾ ಎಂದರೆ ಇಲ್ಲ. ಶಾರವ್ವಳಿಗೆ ಗಂಡ ಮಕ್ಕಳು ಇದ್ದರಾ ಎಂದರೆ ಮದುವೆಯಿಲ್ಲದೆ ತೀರಿಕೊಂಡಿರುತ್ತಾಳೆ.

ನಿಮ್ಮ ವಂಶಾವಳಿಯಲ್ಲಿ ಫಕ್ಕೀರಪ್ಪ ರವರಿಗೆ ಮತ್ತು ಶಾರವ್ವ ರವರಿಗೆ ಮದುವೆಯಾಗಿಲ್ಲ ಎಂದು ತೋರಿಸಿಲ್ಲ ಎಂದರೆ ಸರಿಯಲ್ಲ. ಫಕ್ಕೀರಪ್ಪರವರಿಗೆ ಮದುವೆ ಆಗಿಲ್ಲ ಮತ್ತು ಮಕ್ಕಳು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಫಕ್ಕೀರಪ್ಪವರಿಗೆ ಸಾವಕ್ಕ ಎಂಬ ಹೆಂಡತಿ ಭಾರತಿ, ಅನಿಲ ಎಂಬ ಮಕ್ಕಳು ಇದ್ದಾರೆ ಎಂದರೆ ಸರಿಯಲ್ಲ. ಫಕ್ಕೀರಪ್ಪ ರವರಿಗೆ ಸಾವಕ್ಕ ಎಂಬ ಹೆಂಡತಿ ಭಾರತಿ, ಅನಿಲ ಎಂಬ ಮಕ್ಕಳು ಇದ್ದರು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಫಕ್ಕೀರಪ್ಪನ ಮತ್ತು ಶಾರವ್ವಳವಾರಸುದಾರಾರನ್ನು ತೋರಿಸಿಲ್ಲ ಎಂದರೆ ಸರಿ.

ನಿಮ್ಮ ತಾಯಿಯ ತವರುರೂ ಯಾವುದು ಎಂದರೆ ಹುಲಗೂರ. ನೀನು ಮತ್ತು ನಿಮ್ಮ ತಾಯಿ ಸವಣೂರಿನಲ್ಲಿ ವಾಸವಾಗಿದ್ದೀರಿ ಎಂದರೆ ಸರಿ. ಸುಮಾರು 60-70 ವರ್ಷದಿಂದ ನೀವು ಸವಣೂರಿನಲ್ಲಿಯೇ ವಾಸವಾಗಿದ್ದೀರಿ ಎಂದರೆ ಸರಿ. ಸವಣೂರ ಪುರಸಭೆಯಲ್ಲಿ ವಾಟರಮ್ಯಾನ

ಆಗಿ ಕೆಲಸ ಮಾಡುತ್ತಿದ್ದರಿ ಎಂದರೆ ಸರಿ. ಈಗ ನಿವೃತ್ತಿ ಹೊಂದಿದ್ದೇನೆ. ಸವಣೂರನಲ್ಲಿ ಸ್ವಂತ ಮನೆ ಇದೆ ಎಂದರೆ ನಮ್ಮ ತಾಯಿಯ ಮನೆ ಇದೆ. ಆಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಆ ಮನೆ ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ.

ದಾವಾ ಆಸ್ತಿಯ ನಂಬರ ಹೇಳಲು ಆಗುತ್ತದೆಯಾ ಎಂದರೆ 47/3 ಮತ್ತು ಒಂದು ಮನೆ ಇರುತ್ತದೆ. ಮನೆಯ ಆಸ್ತಿ ನಂ. ನನಗೆ ಗೊತ್ತಿಲ್ಲ. ದಾಖಲೆ ಕೊಟ್ಟಿದ್ದೇನೆ. ಸರ್ವೆ ನಂ. 47/3 ರ ಮತ್ತು ಮನೆಯ ಚಕ್ಕಬಂದಿ ಹೇಳಲು ಆಗುತ್ತದೆಯಾ ಎಂದರೆ ಆಗುವುದಿಲ್ಲ. ನೀವು ಮತ್ತು ನಿಮ್ಮ ತಾಯಿ ಪ್ರತಿವಾದಿಯರ ಕುಟುಂಬಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.